**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 25-10 -2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರವರಿಂದಃ

ಆರೋಪಿ ನಮ್ಮ ಊರಿನವರು ಎಂದರೆ ಸರಿ. ಆರೋಪಿಯವರು 2017 ರಲ್ಲಿ ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಆರೋಪಿ ವ್ಯವಹಾರ ಮಾಡಿರುವುದನ್ನು ನೋಡಿಲ್ಲ. ನನ್ನ ಗಂಡನ ಖಾತೆಯಲ್ಲಿ 3 ಲಕ್ಷ ಹಣ ಇದ್ದದ್ದುನ್ನು ನೋಡಿದ್ದೇನೆ. ಸದರಿ ಹಣವನ್ನು ಆರೋಪಿಯವರಿಗೆ ನನ್ನ ಎದುರು ಕೊಟ್ಟಿರುತ್ತಾರೆ. ಯಾವಾ ದಿನಾಂಕದಂದು ನನ್ನ ಸಮ್ಮುಖ ಆರೋಪಿಗೆ ಹಣ ನೀಡಿದ್ದಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 6 ವರ್ಷವಾಗಿದೆ ಎನ್ನುತ್ತಾರೆ. ನನ್ನ ಗಂಡ ಆರೋಪಿಗೆ ಹಣ ನೀಡಿದಾಗ, ಬಡ್ಡಿ ಮಾತುಕತೆ ಆಗಿದೆ, 3 ತಿಂಗಳಲ್ಲಿ ಹಿಂದುರುಗಿಸುವುದಾಗಿ ಹೇಳಿ 1 ತಿಂಗಳು ಬಡ್ಡಿ ನೀಡಿದ್ದಾರೆ. ಸದರಿಯವರು ಶೇಕಡಾ 2 ರಂತೆ 3 ಸಾವಿರ ಬಡ್ಡಿ ನೀಡಿರುತ್ತಾರೆ. 3 ತಿಂಗಳ ನಂತರ ಹಣ ಕೇಳಿದಾಗ, ನನ್ನ ಬಳಿ ಹಣವಿಲ್ಲವೆಂದು ಆರೋಪಿ ನಮ್ಮ ಮನೆಗೆ ಬಂದು ಚೆಕ್ ಗೆ ಸಹಿ ಮಾಡಿ ಕೊಟ್ಟಿರುತ್ತಾರೆ. ಆರೋಪಿಯ ಸಹಿ ಯಾವುದು ಎಂದು ಗುರುತಿಸಲು ಸಾಧ್ಯವಿಲ್ಲ. ಸದರಿ ಚೆಕ್ ನ್ನು ನನ್ನ ಸಮ್ಮುಖದಲ್ಲಿ ಸಹಿ ಮಾಡಿ ಕೊಟ್ಟಿರುತ್ತಾರೆ. ಚೆಕ್ ನ ಒಕ್ಕಣೆಯನ್ನು ಯಾರಾ ಬಳಿಯೋ ಬರೆಸಿ ತಂದಿದ್ದರು. ಸದರಿ ಚೆಕ್ ನ್ನು ಕೊಟ್ಟಾಗ ಬಡ್ಡಿ ಕೇಳಿದ್ದು ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸುವಂತೆ ಹೇಳಿದ್ದರು. ಸದರಿಯವರು ನಿಡಘಟ್ಟ ಗ್ರಾಮದ ಚೆಕ್ ನೀಡಿದ್ದು, ಅದರ ಹೆಸರು ನನಗೆ ಗೊತ್ತಿಲ್ಲ. ನಿಡಘಟ್ಟ ಗ್ರಾಮದಲ್ಲಿ ಕಾರ್ಪೋರೇಷನ್ ಬ್ಯಾಂಕ್ ಇರದೇ ವಿಜಯ ಬ್ಯಾಂಕ್ ಮಾತ್ರ ಇತ್ತು ಮತ್ತು ಸದರಿಯು ಈಗ ಬ್ಯಾಂಕ್ ಆಫ್ ಬರೋಡಾ ಆಗಿದೆ ಎಂದರೆ ಸರಿ.

ಆರೋಪಿ ಯಾವಾ ಚೆಕ್ ನ್ನು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಚೆಕ್ ಯಾವಾ ಬ್ಯಾಂಕ್ ದು ಎಂದು ನಾನು ನೋಡಿಲ್ಲ. ಆರೋಪಿ ನೀಡಿದ ಚೆಕ್ ನಿಡಘಟ್ಟ ಗ್ರಾಮದ ಚೆಕ್ ಎಂದು ಯಾವಾ ಆಧಾರದ ಮೇಲೆ ಹೇಳುತ್ತೀರಾ ಎಂದು ಸಾಕ್ಷಿಯು ನನಗೆ ಗೊತ್ತಿದ್ದು, ನಾನು ಅಲ್ಲಿಗೆ ಹೋಗುತ್ತಿದ್ದರಿಂದ ಗೊತ್ತಾಗಿದೆ ಎನ್ನುತ್ತಾರೆ. ಊರಿನಲ್ಲಿ ನಮ್ಮ ಸಂಬಂಧಿಕರ ಗುಂಪು ಸೇರಿ ಚೀಟಿ ನಡೆಸುತ್ತಿದ್ದೆವು ಅದರಲ್ಲಿ ಆರೋಪಿಯು ಕೂಡಾ ಚೀಟಿ ಹಾಕಿದ್ದರು ಎಂದರೆ ಸರಿಯಲ್ಲ. ಆರೋಪಿಯು ನಮ್ಮೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ ಮತ್ತು ನಮಗೆ ಹಣ ನೀಡಬೇಕಾಗಿಲ್ಲ ಎಂದರೆ ಸರಿಯಲ್ಲ. ಯಾವಾ ಚೆಕ್ ನ್ನು ಹಾಜರುಪಡಿಸಿದ್ದೆವೆಂದು ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಮತ್ತು ನಮ್ಮ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇಲ್ಲದಿದ್ದರೂ ಬಡ್ಡಿಗಾಗಿ ಸಾಲ ನೀಡಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಮ್ಮ ಊರಿನಲ್ಲಿ ಅಂಚೆ ಕಚೇರಿ ಇದೆ ಎಂದರೆ ಸರಿ. ವಿಳಾಸದಾರರ ಮನೆಯು ಬೀಗ ಹಾಕಿದ್ದಲ್ಲಿ ಅಕ್ಕಪಕ್ಕದವರನ್ನು ವಿಚಾರಿಸುತ್ತಾರೆ ಎಂದರೆ ಸರಿ. ನೋಟಿಸ್ ನ್ನು ಆರೋಪಿಯವರಿಗೆ ನೀಡಿಲ್ಲದಿದ್ದರೂ ಅಂಚೆ ಇಲಾಖೆಯವರೊಂದಿಗೆ ಶಾಮಿಲ್ ಆಗಿ ಜಾರಿಯಾಗದಂತೆ ನೋಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ನೋಟಿಸ್ ನ್ನು ಜಾರಿ ಮಾಡುವ ಉದ್ದೇಶ ಇದ್ದಲ್ಲಿ ಆರೋಪಿಯ ದೂರವಾಣಿ ಸಂಖ್ಯೆ ಬರೆಯುತ್ತಿದ್ದೀರೀ ಎಂದರೆ ಬರೆದಿದ್ದೆ ಎನ್ನುತ್ತಾರೆ. ಸದರಿ ನೋಟಿಸ್ ಜಾರಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿಯವರು ಊರಿನಲ್ಲಿ ಇಲ್ಲದ ಕಾರಣ ವಿಳಾಸದಾರರು ಇಲ್ಲ ಎಂದು ವಾಪಸ್ ಮಾಡಲಾಗಿದೆ ಎಂದರೆ ಸಾಕ್ಷಿಯು ಊರಿನಲ್ಲಿದ್ದರು ಎನ್ನುತ್ತಾರೆ. ನನ್ನ ಪ್ರಮಾಣಪತ್ರದಲ್ಲಿ

ಬರೆದಿರುವ ವಿಚಾರ ತಿಳಿದುಕೊಂಡಿದ್ದೇನೆ. ನನ್ನ ಪ್ರಮಾಣಪತ್ರದಲ್ಲಿನ ಹೇಳಿಕೆಯನ್ನು ನನ್ನ ಗಂಡ ಹೇಳಿ ಬರೆಸಿರುತ್ತಾರೆ. ನನ್ನ ಗಂಡ ಆರೋಪಿಗೆ ಹಣ ನೀಡಬೇಕಿದ್ದು ಅದಕ್ಕಾಗಿ ಪ್ರೋನೋಟ್ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿಯವರು ನನ್ನ ಗಂಡನ ಮರಣಾಂತರ ಊರಿಗೆ ಬಂದದ್ದುರಿಂದ ಸದರಿಯವರು ನನ್ನ ಗಂಡನ ವಿರುದ್ಧ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ. ಆ ನಂತರ ಪ್ರಕರಣ ದಾಖಲಿಸಿರುವ ವಿಚಾರ ಆರೋಪಿಗೆ ತಿಳಿದಿದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು